# ಮನಸ್ಸಿನ ಕತ್ತಲೆಯೊಳಗಿನ ಕಥೆ

## ತೆರೆಗೆ ಬರಲು ಸಜ್ಜಾಗಿದೆ 'ಲಾರ್ಡ್ ಗಾಗ'

ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಶೀರ್ಷಿಕೆ ಮತ್ತು ಹೊಸತನದ ಕಥಾಹಂದರದ ಮೂಲಕ ಗಮನ ಸೆಳೆಯುತ್ತಿರುವ ಚಿತ್ರಗಳ ಸಾಲಿಗೆ ಇದೀಗ 'ಲಾರ್ಡ್ ಗಾಗ' ಸೇರ್ಪಡೆಯಾಗಿದೆ. ಸಸ್ಪೆನ್ಸ್, ಪ್ರೀತಿ, ವ್ಯಸನ ಹಾಗೂ ಮನುಷ್ಯನ ಮನಸ್ಸಿನ ಹಲವು ಭಾವನೆಗಳನ್ನು ಒಳಗೊಂಡ ರೊಮ್ಯಾಂಟಿಕ್ ಸೈಕಾಲಜಿಕಲ್ ಥ್ರಿಲ್ಲರ್ ಆಗಿ ಈ ಸಿನಿಮಾ ರೂಪುಗೊಳ್ಳುತ್ತಿದೆ.

ಈಗಾಗಲೇ ಬಹುತೇಕ ಚಿತ್ರೀಕರಣ ಪೂರ್ಣಗೊಂಡಿರುವ ಚಿತ್ರತಂಡ, ಇತ್ತೀಚೆಗೆ ಸಿನಿಮಾದ ಶೀರ್ಷಿಕೆಯನ್ನು ಅಧಿಕೃತವಾಗಿ ಪರಿಚಯಿಸಿದೆ. ಯುವ ನಿರ್ದೇಶಕ ವೈಕೆ ಕಥೆ ಮತ್ತು ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. 'ಝೀರೋ ಗ್ರ್ಯಾವಿಟಿ ಫಿಲಂಸ್' ಬ್ಯಾನರ್‌ನಲ್ಲಿ ಉದ್ಯಮಿ ಮುಕಿ ರಘುನಾಥನ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಮನುಷ್ಯನ ಮನಸ್ಸಿನಲ್ಲಿ ಹುಟ್ಟುವ ಪ್ರೀತಿ, ಪ್ರೇಮ, ಪ್ರಣಯ, ಭಾವನೆ, ವ್ಯಸನ ಹಾಗೂ ಜೀವನದ ಆಯ್ಕೆಗಳ ಸುತ್ತ ಕಥೆ ಸಾಗಲಿದೆ. ಇವುಗಳನ್ನು ವಿಭಿನ್ನ ನಿರೂಪಣೆ ಹಾಗೂ ನವೀನ ಪ್ರಯೋಗಗಳೊಂದಿಗೆ ತೆರೆಗೆ ತರುವ ಪ್ರಯತ್ನ ಮಾಡಲಾಗಿದೆ. ಹೀಗಾಗಿ 'ಲಾರ್ಡ್ ಗಾಗ' ಅನ್ನು ಔಟ್ ಅಂಡ್ ಔಟ್ ಕಲ್ಟ್ ಸಿನಿಮಾ ಎನ್ನುವುದು ಚಿತ್ರತಂಡದ ಮಾತು.




ಚಿತ್ರದಲ್ಲಿ ಶೂನ್ಯ ನಾಯಕ ನಟನಾಗಿ ಅಭಿನಯಿಸಿದ್ದಾರೆ. ಕಥೆಯ ಪ್ರಮುಖ ಅಂಶಗಳನ್ನು ಸದ್ಯಕ್ಕೆ ಗೌಪ್ಯವಾಗಿಟ್ಟಿರುವ ಚಿತ್ರತಂಡ, ಶೀಘ್ರದಲ್ಲೇ ಪಾತ್ರಗಳು, ತಾಂತ್ರಿಕ ವರ್ಗ ಹಾಗೂ ಚಿತ್ರದ ಮತ್ತಷ್ಟು ವಿಶೇಷತೆಗಳನ್ನು ಪರಿಚಯಿಸುವ ಸಿದ್ಧತೆಯಲ್ಲಿದೆ.

ವಿಶೇಷವೆಂದರೆ, 'ಲಾರ್ಡ್ ಗಾಗ' ಕನ್ನಡಕ್ಕೆ ಸೀಮಿತವಾಗದೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ಬೆಂಗಾಲಿ, ಭೋಜಪುರಿ ಸೇರಿದಂತೆ ಏಳುಕ್ಕೂ ಹೆಚ್ಚು ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡುವ ಉದ್ದೇಶವನ್ನು ಚಿತ್ರತಂಡ ಹೊಂದಿದೆ. ವಿಭಿನ್ನ ಶೀರ್ಷಿಕೆ ಹಾಗೂ ಕುತೂಹಲ ಮೂಡಿಸುವ ಕಥೆಯೊಂದಿಗೆ ಸಿನಿಮಾ ಈಗಾಗಲೇ ಸಿನಿಪ್ರಿಯರ ಗಮನ ಸೆಳೆಯಲು ಆರಂಭಿಸಿದೆ.